# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 18.12.2010**

ಮಾರುಕಟ್ಟೆ ಸ್ಥಾಯಿ ಸಮಿತಿಯ ವತಿಯಿಂದ ದಿನಾಂಕ: 18.12.2010 ರಂದು ಬೆಳಿಗ್ಗೆ 11.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಡೆತನಕ್ಕೆ ಸೇರಿದ್ದ ಜಯನಗರ ವಾಣಿಜ್ಯ ಸಂಕೀರ್ಣಕ್ಕೆ ಭೇಟಿ ನೀಡಿ, ಸ್ಥಳ ತಪಾಸಣೆ ಮಾಡಲಾಯಿತು.

ವಾಣಿಜ್ಯ ಸಂಕೀರ್ಣಕ್ಕೆ ಪ್ರವೇಶಿಸುತ್ತಿದ್ದಂತೆಯೇ, ಸದರಿ ಸಂಕೀರ್ಣದ ಒಳ ಭಾಗದಲ್ಲಿರುವ ಉದ್ಯಾನವನವನ್ನು ಸಮರ್ಪಕವಾಗಿ ನಿರ್ವಹಿಸದಿರುವುದನ್ನು ಕಂಡ ಸಮಿತಿಯ ಸದಸ್ಯರು ಬೇಸರವನ್ನು ವ್ಯಕ್ತಪಡಿಸುತ್ತಾ, ಸಂಬಂಧಪಟ್ಟಂತಹ ತೋಟಗಾರಿಕೆ ಅಧೀಕ್ಷಕರಿಗೆ ಇನ್ನು ಮುಂದೆ ಉದ್ಯಾನವನವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸೂಚಿಸಲು, ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ತಿಳಿಸಲಾಯಿತು.

ಮುಂದುವರೆದಂತೆ, ಸಂಕೀರ್ಣದ ಒಳಭಾಗದ ಅಂಗಡಿ ಮಾಲೀಕರು ಸಾರ್ವಜನಿಕರಿಗೆ ಓಡಾಡಲು ಬಿಟ್ಟಿರುವ ಬಹುತ್ವದ ದಾರಿಯಲ್ಲಿಯೇ ಅಂಗಡಿಗಳ ಸಾಮಾನುಗಳನ್ನು ಶೇಖರಿಸಿರುವುದನ್ನು ಕಂಡ ಸಮಿತಿಯು ಅಂಗಡಿ ಮಾಲೀಕರಿಗೆ ತೆರವುಗೊಳಿಸಲು ಸೂಚಿಸಿ, ಇನ್ನು ಮುಂದೆ ಈ ರೀತಿಯಾಗದಂತೆ ಎಚ್ಚರವಹಿಸಲು ಸಂಬಂಧಿಸಿದ ಮಾರುಕಟ್ಟೆ ಅಧಿಕಾರಿಗಳಿಗೆ ತಾಕೀತು ಮಾಡಲಾಗಿರುತ್ತದೆ.

ನಂತರ, ಸಂಕೀರ್ಣದ ಆವರಣದಲ್ಲಿರುವ ಎಸ್.ಬಿ.ಎಂ. ಬ್ಯಾಂಕಿನ ಮುಂದೆ ಸಾರ್ವಜನಿಕರು ಓಡಾಡಲು ಬಿಟ್ಟಿರುವ ದಾರಿಯಲ್ಲಿಯೇ ಬ್ಯಾಂಕಿನ ನೌಕರರು ತಮ್ಮ ವಾಹನಗಳನ್ನು ನಿಲ್ಲಿಸಲಾಗಿರುವುದನ್ನು ಕಂಡ ಸಮಿತಿಯು ಅಸಮಧಾನವನ್ನು ವ್ಯಕ್ತಪಡಿಸುತ್ತಾ, ತಕ್ಷಣವೇ ವಾಹನಗಳನ್ನು ತೆರವುಗೊಳಿಸಲು ಸಂಬಂಧಿಸಿದ ವಾಹನ ನಿಲುಗಡೆ ಗುತ್ತಿಗೆದಾರರಿಗೆ ಆದೇಶ ನೀಡಲಾಗಿರುತ್ತದೆ.

ತದನಂತರ, ಸಮಿತಿಯು ಸಂಕೀರ್ಣದ 2ನೇ ಮಹಡಿಯ ತೆರೆದ ಜಾಗದಲ್ಲಿ ***ಬಂಜಾರ ಹಿಲ್ಸ್ ಗ್ರೂಪ್ ಹೋಟೆಲ್*** ರವರು ಅನಧಿಕೃತವಾಗಿ ತಾತ್ಕಾಲಿಕ ಕಟ್ಟಡವನ್ನು ನಿರ್ಮಿಸಿ, ಸದರಿ ಕಟ್ಟಡದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್‌ನ್ನು ನಡೆಸಲಾಗುತ್ತಿದ್ದು, ಇದರಿಂದ ಪಾಲಿಕೆಯ ಬೊಕ್ಕಸಕ್ಕೆ ಆರ್ಥಿಕವಾಗಿ ಅತಿ ಹೆಚ್ಚು ನಷ್ಟವಾಗುವುದನ್ನು ಕಂಡ ಸಮಿತಿಯು ಸದರಿ ವಿಷಯಕ್ಕೆ ಸಂಬಂಧಿಸಿದ ಪೂರಾ ಕಡತವನ್ನು ಇಂದೇ ಸಮಿತಿಯ ಮುಂದೆ ಮಂಡಿಸಲು ಸಂಬಂಧಿಸಿದ ಅಧಿಕಾರಿ/ನೌಕರರಿಗೆ ಸೂಚಿಸಲಾಗಿರುತ್ತದೆ.

ಸಂಕೀರ್ಣದ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸದ ಕಾರಣ ಸಂಬಂಧಿಸಿದ ಕಿರಿಯ ಅಭಿಯಂತರರಿಗೆ, ಘನತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಿ ಶುಚಿತ್ವವನ್ನು ಕಾಪಾಡಲು ಸೂಚಿಸಲಾಗಿರುತ್ತದೆ. ಮುಂದುವರೆದಂತೆ, ವಾಣಿಜ್ಯ ಸಂಕೀರ್ಣದ ಸುತ್ತಮುತ್ತಲಿನ ರಸ್ತೆಗಳಲ್ಲಿ ಅಡ್ಡದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸಿರುವುದನ್ನು ಕಂಡ ಸಮಿತಿಯು ಬೇಸರ ವ್ಯಕ್ತಪಡಿಸುತ್ತಾ, ಸಂಬಂಧಿಸಿದ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸುವಂತೆ ಸೂಚಿಸಲು ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ತಿಳಿಸಲಾಗಿರುತ್ತದೆ.

ತಪಾಸಣೆ ಸಂದರ್ಭದಲ್ಲಿ ಮಾರುಕಟ್ಟೆ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್.ಹೆಚ್. ಪದ್ಮರಾಜ್, ಸದಸ್ಯರುಗಳಾದ ಶ್ರೀಮತಿ ಮಂಜುಳಾದೇವಿ. ಆರ್, ಶ್ರೀ ಕೆ. ಚಂದ್ರಶೇಖರ್, ಶ್ರೀ ವೈ.ಎನ್. ಅಶ್ವಥ್, ಶ್ರೀ ಎಸ್. ವೆಂಕಟೇಶ್ ಬಾಬು, ಶ್ರೀ ವೀಣಾ ನಾಗರಾಜು, ಶ್ರೀ ಎನ್. ಗೋವಿಂದರಾಜು, ಶ್ರೀ ಎನ್. ಚಂದ್ರ ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 18.12.2010**

ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕ: 18.12.2010 ರಂದು ನಂಜಪ್ಪ ವೃತ್ತದಿಂದ ಕೊಡಿಗೇಹಳ್ಳಿಯವರೆಗೆ ನಡೆಸಲಾಗುವ ರಸ್ತೆ ಅಗಲೀಕರಣದ ಸಂಬಂಧ ತಪಾಸಣೆ ನಡೆಸಲಾಯಿತು.

1. ನ್ಯೂ ಬಿ.ಇ.ಎಲ್ ರಸ್ತೆಯಲ್ಲಿ ಬೃಹತ್ ಮಳೆನೀರುಗಾಲುವೆಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ರೂ.212.00 ಲಕ್ಷ ವೆಚ್ಚದಲ್ಲಿ ಗುತ್ತಿಗೆದಾರರಾದ ಮೆ॥ ಮಾಧವ್ ಹೈಟೆಕ್ ಸಂಸ್ಥೆ ರವರು ನಿರ್ವಹಿಸುತ್ತಿರುತ್ತಾರೆ. ಸದರಿ ಕಾಮಗಾರಿಯ ನಿರ್ವಹಣೆಯಲ್ಲಿ ಬಹಳ ವಿಳಂಬವಾಗಿದ್ದು, ಇದರಿಂದಾಗಿ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿರುವುದಾಗಿ ಸ್ಥಳೀಯ ಪಾಲಿಕೆ ಸದಸ್ಯರು ತಿಳಿಸಿದ್ದ ಮೇರೆಗೆ ಸದರಿ ಕಾಮಗಾರಿಯನ್ನು ಪರಿಶೀಲಿಸಲಾಗಿದ್ದು, ಶೇಕಡ 75 ರಷ್ಟು ಕಾಮಗಾರಿಯು ಪೂರ್ಣಗೊಂಡಿದ್ದು, ಮಳೆನೀರುಗಾಲುವೆ ಕಡೆ ಇರುವ ತಡೆಗೋಡೆ ನಿರ್ಮಿಸಿ ಹಾಗೂ **ಅಪ್ರೋಚ್ ರಸ್ತೆಯನ್ನು 30 ದಿವಸಗಳೊಳಗಾಗಿ** ಪೂರ್ಣಗೊಳಿಸಿ ಸಂಚಾರಕ್ಕೆ ಅನುವು ಮಾಡಲು ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು. **ಮತ್ತು ಮೆ॥ ಮಾಧವ್ ಹೈಟೆಕ್ ಸಂಸ್ಥೆಯವರು ಬಹಳಷ್ಟು ಕಡೆ ಪಾಲಿಕೆಯ ಕಾಮಗಾರಿಗಳನ್ನು ನಿರ್ವಹಿಸುತ್ತಿದ್ದು, ಸದರಿಯವರು ನಿರ್ವಹಿಸುತ್ತಿರುವ ಎಲ್ಲಾ ಕಡೆಗಳಲ್ಲೂ ಎಲ್ಲಾ ಯೋಜನೆಗಳ ನಿರ್ವಹಣೆಯಲ್ಲಿ ಬಹಳ ವಿಳಂಭವಾಗುತ್ತಿರುವುದು ಸ್ಥಳ ಪರಿಶೀಲನೆಯಿಂದ ಕಂಡುಬಂದಿರುವುದರಿಂದ ಸದರಿ ಸಂಸ್ಥೆಯವರಿಗೆ ಈ ವಿಳಂಬ ನೀತಿಗೆ ಕಾರಣ ಕೇಳಿ ನೋಟೀಸ್ ಜಾರಿಮಾಡುವಂತೆ ಈ ಕಾಮಗಾರಿಯ ಉಸ್ತುವಾರಿ ನಡೆಸುತ್ತಿರುವ ಶ್ರೀ ದೇವರಾಜ್, ಮುಖ್ಯ ಅಭಿಯಂತರರು, ಬೃಹತ್ ಮಳೆ ನೀರುಗಾಲುವೆ ರವರಿಗೂ ಸಹ ನೋಟೀಸ್ ಜಾರಿಮಾಡುವಂತೆ ಮಾನ್ಯ ಆಯುಕ್ತರನ್ನು ಕೋರುವುದಾಗಿ ಅಧ್ಯಕ್ಷರು ತಿಳಿಸಿದರು.**

2. ನಂಜಪ್ಪ ವೃತ್ತದಿಂದ ಕೊಡಿಗೇಹಳ್ಳಿ ವರೆಗೆ ರಸ್ತೆ ಅಗಲೀಕರಣಗೊಳಿಸುವ ಕಾರ್ಯದ ಸಂಬಂಧ ಸ್ಥಳ ಪರಿಶೀಲಿಸಲಾಯಿತು. ಸದರಿ ರಸ್ತೆಯನ್ನು ರೂ.12.00 ಕೋಟಿಗಳ ವೆಚ್ಚದಲ್ಲಿ ಸುಮಾರು 3.3 ಕಿ.ಮೀಟರ್ ಉದ್ದ ಮತ್ತು 60 ಅಡಿಗಳ ಅಗಲ ರಸ್ತೆಯನ್ನು ಅಗಲೀಕರಣಗೊಳಿಸಲು ಉದ್ದೇಶಿದ್ದು, ಸದರಿ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆ ಅಧಿಕವಾಗಿರುವುದರಿಂದ ಪಾಲಿಕೆಯ ಸ್ಥಳೀಯ ಸದಸ್ಯರು ಹಾಗೂ ಸ್ಥಳೀಯ ಮುಖಂಡರು ಮತ್ತು ಸ್ಥಳೀಯ ನಾಗರಿಕರೂ ಸಹ ರಸ್ತೆ ಅಗಲೀಕರಣಕ್ಕೆ ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಸಹಮತ ಸೂಚಿಸಿರುತ್ತಾರೆ. ಹಾಗೂ ಸಮಿತಿಯ ಸದಸ್ಯರು ಮತ್ತು ಅಧಿಕಾರಿಗಳೊಂದಿಗೆ ಸದರಿ ರಸ್ತೆಯ ಉದ್ದಕ್ಕೂ ಕಾಲ್ನಡಿಗೆಯಲ್ಲಿ ಸಂಚರಿಸಲಾದ ಸಂದರ್ಭದಲ್ಲಿ ಬಹಳಷ್ಟು ಜನ ಸ್ಥಳೀಯರು, ರಸ್ತೆಯಲ್ಲಿ ಬರುವ ಸ್ವತ್ತಿನ ಮಾಲೀಕರು ಹಾಗೂ ವಾಹನ ಚಾಲಕರು ಸದರಿ ರಸ್ತೆಯನ್ನು ಅಗಲೀಕರಣಗೊಳಿಸಲು ಅತ್ಯಗತ್ಯವೆಂದು ತಮ್ಮ ಸಹಮತವನ್ನು ವ್ಯಕ್ತಪಡಿಸಿದ್ದು, ಒಟ್ಟಾರೆ ಎಲ್ಲರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡು, ಸಾರ್ವಜನಿಕರ ಹಿತದೃಷ್ಟಿಯಿಂದ ರಸ್ತೆ ಅಗಲೀಕರಣವು ಅತ್ಯಗತ್ಯವಾಗಿರುತ್ತದೆಂದು ಸಮಿತಿಯು ತೀರ್ಮಾನಿಸುತ್ತಾ, ಸದರಿ ರಸ್ತೆ ಅಗಲೀಕರಣದ ಸಂಬಂಧ ಅಗತ್ಯ ಭೂಸ್ವಾಧೀನದ ಬಗ್ಗೆ ಸ್ವಾಧೀನಕ್ಕೊಳಪಡುವ ಸ್ವತ್ತುಗಳನ್ನು ಟಿ.ಡಿ.ಆರ್. ಪದ್ಧತಿಯಲ್ಲಿ ಭೂಸ್ವಾಧೀನ ಮಾಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು. ಸದರಿ ಕಾಮಗಾರಿಗಳ ಸಂಬಂಧ ಕೂಡಲೇ ಡಿ.ಪಿ.ಆರ್. ಸಿದ್ಧಪಡಿಸಿ ಅನುಮೋದನೆಗಾಗಿ ಸಮಿತಿಗೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

3. ಟಾಟಾ ನಗರ ಪ್ರವೇಶದ ಪ್ರದೇಶದಲ್ಲಿ ಬೃಹತ್ ಮಳೆನೀರುಗಾಲುವೆ ಅಂದಾಜು ಮೊತ್ತ ರೂ.3.2 ಕೋಟಿಗಳ ವೆಚ್ಚದಲ್ಲಿ 560 ಮೀಟರ್ ಉದ್ದ 6.5 ಮೀಟರ್ ಅಗಲದ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಜಾಗದ ಸಮಸ್ಯೆಯಿಂದಾಗಿ ಸದರಿ ಕಾಮಗಾರಿಯು ವಿಳಂಭವಾಗಿರುವುದಾಗಿ ಗುತ್ತಿಗೆದಾರರು ತಿಳಿಸಿದ್ದು, ಪಾಲಿಕೆಯ ಸ್ಥಳೀಯ ಸದಸ್ಯರ ಮುಂದಾಳತ್ವದಲ್ಲಿ ಅಗತ್ಯ ಜಾಗವನ್ನು ಸ್ವಾಧೀನ ಪಡಿಸಿಕೊಂಡು ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಮುಕ್ತಗೊಳಿಸಲು ಸೂಚಿಸಲಾಯಿತು.

ಈ ಸಂದರ್ಭದಲ್ಲಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್. ರವೀಂದ್ರ, ಸದಸ್ಯರುಗಳಾದ ಶ್ರೀ ಹರೀಶ್. ಎಸ್., ಶ್ರೀ ಅಬ್ದುಲ್ ರಖೀಬ್ ಝಾಕೀರ್, ಶ್ರೀ ಅಶ್ವತ್ಥ್ ನಾರಾಯಣಗೌಡ, ಶ್ರೀ ಟಿ. ತಿಮ್ಮೇಗೌಡ, ಶ್ರೀ ಸುರೇಶ್. ಹೆಚ್., ಪಾಲಿಕೆ ಸದಸ್ಯರುಗಳಾದ ಶ್ರೀಮತಿ ನಂದಿನಿ, ಶ್ರೀ ಪಿಳ್ಳಪ್ಪ, ಪಾಲಿಕೆಯ ಹಿರಿಯ ಅಧಿಕಾರಿಗಳು ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**